# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೬–ಬಿ<br>Part – VI-B | ಬೆಳಗಾವಿ, ಗುರುವಾರ, ೨೬ ಮಾರ್ಚ್, ೨೦೨೬ (ಚೈತ್ರ ೦೫, ಶಕ ವರ್ಷ ೧೯೪೮)<br>Belagavi, Thursday, 26 March, 2026 (Chaitra 05, Shaka Varsha 1948) | ನಂ. ೦೬<br>No. 06 |
|---|---|---|


ಕರ್ನಾಟಕ ಸರ್ಕಾರ

**(ಕಂದಾಯ ಇಲಾಖೆ)**

**ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾದಂಡಾಧಿಕಾರಿಗಳ ಕಛೇರಿ, ವಿಜಯಪುರ**

**Office of the Deputy Commissioner & District Magistrate, Vijayapura**


ದರ್ಬಾರ್‌ಹಾಲ್, ವಿಜಯಪುರ-586101(ಕರ್ನಾಟಕ) | Darbar Hall, Vijayapura - 586101(Karnataka)

Phone No: 08352 - 250021, 250479 | email: deo.bijapur@gmail.com, vijayapurdc@gmail.com


ನಂ:ಚುನಾವಣೆ:ಜಿ.ಪಂ.ತಾ.ಪಂ:ಸಿ.ಆರ್-09/2025-26 ದಿನಾಂಕ:26/03/2026

## ಕರಡು ಅಧಿಸೂಚನೆ

ಮಾನ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ:RD16 LRD 2023 ದಿನಾಂಕ:20.12.2024 ಹಾಗೂ ದಿನಾಂಕ:06.10.2024ರಡಿ ವಿಜಯಪುರ ಜಿಲೆಯ ಆಲಮೇಲ ತಾಲ್ಲೂಕಿನ **ಮೋರಟಗಿ** ಗ್ರಾಮ ಪಂಚಾಯತಿ ವ್ಯಾಪ್ತಿಯ ಹಂಚಿನಾಳ ಗ್ರಾಮವನ್ನು ಮತ್ತು **ಗಬಸಾವಳಗಿ** ಗ್ರಾಮ ಪಂಚಾಯತಿ ವ್ಯಾಪ್ತಿಯ 1) ಗಬಸಾವಳಗಿ 2) ಕೆರೂರ 3) ಅಹೇರಿ, ಹಾಗೂ 4) ಬಿಸನಾಳ ಮತ್ತು **ಗುತ್ತರಗಿ** ಗ್ರಾಮ ಪಂಚಾಯತಿ ವ್ಯಾಪ್ತಿಯ 1) ಗುತ್ತರಗಿ ಹಾಗೂ 2) ಭಂಟನೂರ ಹೀಗೆ ಒಟ್ಟು ಆಲಮೇಲ ತಾಲೂಕಿನ 07 ಗ್ರಾಮಗಳನ್ನು ಸಿಂದಗಿ ತಾಲ್ಲೂಕಿಗೆ ಸೇರ್ಪಡೆಗೊಳಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಮಾನ್ಯ ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 23ಜಿಪಿಎಸ್ 2026, ದಿನಾಂಕ:11.03.2026 ರನ್ವಯ ವಿಜಯಪುರ ಆಲಮೇಲ ತಾಲೂಕಿನ 13-ಮೋರಟಗಿ ಜಿಲ್ಲಾ ಪಂಚಾಯತ್ಪ್ರಾದೇಶಿಕ ಚುನಾವಣಾ ಕ್ಷೇತ್ರ ವ್ಯಾಪ್ತಿಯ 06-ಮೋರಟಗಿ ತಾಲೂಕು ಪಂಚಾಯತ್ಪ್ರಾದೇಶಿಕ ಚುನಾವಣಾ ಕ್ಷೇತ್ರ ವ್ಯಾಪ್ತಿಯ ಹಂಚಿನಾಳ ಗ್ರಾಮ ಹಾಗೂ 7-ಗಬಸಾವಳಗಿ ತಾಲೂಕು ಪಂಚಾಯತ್ಪ್ರಾದೇಶಿಕ ಚುನಾವಣಾ ಕ್ಷೇತ್ರ ವ್ಯಾಪ್ತಿಯ 1) ಗಬಸಾವಳಗಿ 2) ಕೆರೂರ 3) ಅಹೇರಿ, 4) ಬಿಸನಾಳ 5) ಗುತ್ತರಗಿ 6) ಭಂಟನೂರ ಎಲ್ಲಾ ಗ್ರಾಮಗಳು ಆಲಮೇಲ ತಾಲೂಕಿನಿಂದ ಸಿಂದಗಿ ತಾಲೂಕಿಗೆ ಸೇರ್ಪಡೆಗೊಳಿಸಿ ಮರು ವಿಂಗಡಿಸಿ

ಕರ್ನಾಟಕ ಗ್ರಾಮಸ್ವರಾಜ್ಮತ್ತು ಪಂಚಾಯತ್ರಾಜ್ ಅಧಿನಿಯಮ 1993 ರ ಪ್ರಕರಣ 4 ರಂತೆ ಅಧಿಸೂಚನೆ ಹೊರಡಿಸಲು ಅನುಮತಿ ನೀಡಿ, ನಿರ್ದೇಶಿಸಿದ್ದು ಇರುತ್ತದೆ.

ಮುಂದುವರೆದು, ಸರ್ಕಾರದ ಕಾರ್ಯದರ್ಶಿಗಳು (ಪಂಚಾಯತ್ರಾಜ್) ಕರ್ನಾಟಕ ಸರ್ಕಾರ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ರಾಜ್ ಇಲಾಖೆರವರ ಅರೆ ಸರ್ಕಾರಿ ಪತ್ರ ದಿನಾಂಕ:07.01.2026ರ ಪತ್ರದಲ್ಲಿ "ನಗರ ಪ್ರದೇಶವಾಗಿ ಪರಿವರ್ತನೆಯಾಗಿ, ಬಾಕಿ ಉಳಿದಂತಹ ಹಾಗೂ ಭೌಗೋಳಿಕವಾಗಿ ನಿರಂತರತೆಯಲ್ಲಿ ಹೊಂದಿರುವ ಗ್ರಾಮಗಳನ್ನು/ಜನವಸತಿ ಪ್ರದೇಶಗಳನ್ನು ಒಗ್ಗೂಡಿಸಿ ಕರ್ನಾಟಕ ಗ್ರಾಮಸ್ವರಾಜ್ಮತ್ತು ಪಂಚಾಯತ್ರಾಜ್ ಅಧಿನಿಯಮದ ಪ್ರಕರಣ4(1)ರಲ್ಲಿ ನಿಗಧಿಪಡಿಸಿರುವ ಜನಸಂಖ್ಯೆಯನ್ನು ಹೊಂದಿದ್ದರೆ, ಅಂತಹ ಪ್ರದೇಶಗಳನ್ನು ಹೊಸ ಗ್ರಾಮ ಪಂಚಾಯತಿಯಾಗಿ ಘೋಷಿಸುವುದು. ಭೌಗೋಳಿಕವಾಗಿ ನಿರಂತರತೆ ಅಥವಾ ಜನಸಂಖ್ಯೆಯನ್ನು ಹೊಂದದಿದ್ದಲ್ಲಿ ಅಂತಹ ಪ್ರದೇಶಗಳನ್ನು ಹತ್ತಿರದ ಗ್ರಾಮಪಂಚಾಯಿತಿಗಳಿಗೆ ಸೇರಿಸಿ ಪುನರ್ರಚಿಸಿದ ಗ್ರಾಮ ಪಂಚಾಯತಿಯನ್ನು ಅಧಿನಿಯಮದ ಪ್ರಕರಣ4 ರಡಿಯಲ್ಲಿ ಘೋಷಿಸತಕ್ಕದ್ದು ಎಂದು ಆದೇಶ ನೀಡಲಾಗಿರುತ್ತದೆ. ನ್ಯಾಯಾಲಯದ ನಿಂದನಾ ಅರ್ಜಿ ಸಂಖ್ಯೆ:534/2024 C/W 1151/2023 ಮತ್ತು 1152/2023 ಬಾಕಿ ಇರುವುದರಿಂದ, ಸಮಯದ ಅಭಾವದ ಕಾರಣ ಕರಡು ಅಧಿಸೂಚನೆ ಮೇಲಿನ ಆಕ್ಷೇಪಣೆಯನ್ನು 07 ದಿನಗಳಿಗೆ ಸೀಮಿತಗೊಳಿಸಿ ಆಹ್ವಾನಿಸತಕ್ಕದ್ದು ಎಂದು ನಿರ್ದೇಶಿಸಲಾಗಿದ್ದು ಇರುತ್ತದೆ.

ಕಾರಣ, ಕರ್ನಾಟಕ ಗ್ರಾಮಸ್ವರಾಜ್ಮತ್ತು ಪಂಚಾಯತರಾಜ್ ಅಧಿನಿಯಮ, 1993ರ 4ನೇ ಪ್ರಕರಣದ (1) ನೇ ಉಪಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಡಾ|| ಆನಂದ್. ಕೆ. ಭಾ.ಆ.ಸೇ.. ವಿಜಯಪುರ ಜಿಲ್ಲೆಯ ಜಿಲ್ಲಾಧಿಕಾರಿ ಆದ ನಾನು ಸಿಂದಗಿ ತಾಲ್ಲೂಕಿನ ಈ ಕೆಳಗಿನ ಗ್ರಾಮಪಂಚಾಯತಿಗಳನ್ನು ಮರುವಿಂಗಡಿಸಿ ಈ ಕೆಳಕಂಡಕೋಷ್ಟಕದ 4ನೇ ಅಂಕಣದಲ್ಲಿ ನಿರ್ಧಿಷ್ಟಪಡಿಸಿರುವ ಗ್ರಾಮಗಳನ್ನು 3ನೇ ಅಂಕಣದ ಗ್ರಾಮ ಪಂಚಾಯತಿಯ ವ್ಯಾಪ್ತಿಗೆ ಒಳಪಡುತ್ತವೆ ಎಂದು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

**ಕೋಷ್ಟಕ**

| ಕ್ರ. ಸಂ | ತಾಲೂಕಿನ ಹೆಸರು | ಗ್ರಾಮ ಪಂಚಾಯತಿಯ ಹೆಸರು ಮತ್ತು ಕೇಂದ್ರ ಸ್ಥಾನ | ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳು |
|---|---|---|---|
| 1 | 2 | 3 | 4 |
| 1 | ಸಿಂದಗಿ | ಗಬಸಾವಳಗಿ | ಗಬಸಾವಳಗಿ |
| 2 | | | ಕೆರೂರ |
| 3 | | | ಅಹೇರಿ |
| 4 | | | ಬಿಸನಾಳ |
| 5 | | | ಹಂಚಿನಾಳ |
| 6 | | ಗುತ್ತರಗಿ | ಗುತ್ತರಗಿ |
| 7 | | | ಭಂಟನೂರ |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



ಪ್ರಯುಕ್ತ ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ 4ನೇ ಪ್ರಕರಣದ 2ನೇ ಉಪ-ಪ್ರಕರಣದಂತೆ ಈ ಅಧಿಸೂಚನೆಯಿಂದ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಅಂತಹ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಕಾರಣ ಸಹಿತವಾಗಿ ದಿನಾಂಕ:02.04.2026 ರ ಒಳಗಾಗಿ ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರರವರಿಗೆ ಸಲ್ಲಿಸ ಬಹುದಾಗಿದೆಯೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಿದೆ.

**(ಡಾ|| ಆನಂದ. ಕೆಭಾ.ಆ.ಸೇ)**
**ಜಿಲ್ಲಾಧಿಕಾರಿ**
**ವಿಜಯಪುರ ಜಿಲ್ಲೆ, ವಿಜಯಪುರ**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಧಾರವಾಡ.

SOMASHEKAR B E